ಮಾತುಗಳನ್ನು ಕೇಳಬೇಕಾಗುತ್ತಿತ್ತು.

'ಸುಗಂಧಾ, ಉತ್ತರ ಕೊಡಲು ಏಕಿಷ್ಟು ಅವಸರ? ಬಿದ್ದಿರಲಿ ಬಿಡಿ. ನೀವಿಷ್ಟು ಎಫಿಶಿಯೆನ್ಸಿ ತೋರಿಸಿದ್ದಕ್ಕೆ ನಿಮಗೆ ಬಹುಮಾನ ಸಿಗಲ್ಲ'.

'ಮೇಡಂ, ಇರಲಿ ಬಿಡಿ! ನಮಗೆ ಈ ಪ್ರಶ್ನೆಗಳಿಗೆ ಉತ್ತರ ಕೊಡುವುದಲ್ಲದೆ ಇನ್ನೂ ಬೇಕಾದಷ್ಟು ಕೆಲಸಗಳಿವೆ.'

'ನಿಮ್ಮ ಇಷ್ಟು ದೀರ್ಘ ಉತ್ತರಗಳನ್ನು ನಾನು ಟೈಪ್ ಮಾಡಲಾರೆ. ನಿಮಗೆ ಅರ್ಜೆಂಟ್ ಇದ್ರೆ, ನೀವೇ ಟೈಪ್ ಮಾಡಿ'. ಟೈಪಿಸ್ಟ್ ಸಹ, ಇದು ನನ್ನ ವೈಯಕ್ತಿಕ ವಿಷಯವೆಂಬಂತೆ ಉತ್ತರಿಸುತ್ತಿದ್ದ. ಸದಾ ಚಿಕ್ಕ ಚಿಕ್ಕ ಉತ್ತರಗಳಿಂದ ಕೆಲಸ ಸಾಗದು. ವಸ್ತುಸ್ಥಿತಿಯ ಸಂಪೂರ್ಣ ಮಾಹಿತಿಯನ್ನು ಕೊಡಲು ಗಂಭೀರ ದೂರುಗಳ ಬಗ್ಗೆ ಉತ್ತರ ವರದಿಗಳನ್ನು ವಿಸ್ತಾರವಾಗಿ ಕೊಡುವುದು ಅವಶ್ಯಕವಾಗುತ್ತದೆ.

'ಇಷ್ಟು ದೀರ್ಘ ಉತ್ತರ ಕೊಡುವುದು ಅವಶ್ಯಕವಾಗಿತ್ತು, ಇಲ್ಲದಿದ್ರೆ ಇಷ್ಟು ದೀರ್ಘವಾಗಿ ಉತ್ತರಿಸುತ್ತಾ ಕೂರಲು ನನಗೇನೂ ಆಸಕ್ತಿಯಿಲ್ಲ'. ಒಮ್ಮೊಮ್ಮೆ ನಾನೂ ರೇಗುತ್ತಿದ್ದೆ. ಯಾರೊಂದಿಗೂ ಚರ್ಚೆ ಮಾಡುವುದರಿಂದ ಯಾವ ಲಾಭವಿಲ್ಲ ಎಂಬುದು ನನಗೆ ತಿಳಿದಿತ್ತು. ಅನೇಕ ಬಾರಿ ನನಗೆ ಕೆಡುಕೆನಿಸುತ್ತಿತ್ತು, ಆದರೆ ನಾನು ಅವಮಾನವನ್ನು ಸಹಿಸಿ, ಮುಗುಳ್ನಗುತ್ತಿದ್ದೆ. ಇದನ್ನು ಹೊರತುಪಡಿಸಿ ಬೇರೆ ಉಪಾಯಗಳೂ ಇರಲಿಲ್ಲ; ಏಕೆಂದರೆ ನಾನು ಕೀರ್ತಿಯಾಗಿರಲಿಲ್ಲ ಅಥವಾ ಕಣ್ಣೆತ್ತಿ ನೋಡಿದರೂ ಅಶ್ಲೀಲವಾಗಿ ನಿಂದಿಸುತ್ತಿದ್ದ ಸದಾಶಿವನಂಥ ಪತಿ ಸಹ ನನಗಿರಲಿಲ್ಲ. ಇಂದಿನ ಕಾಲವೇ ಇಂಥ ಜನರಿಂದ ತುಂಬಿದೆ. ಸೋಮಾರಿಗಳು, ಮೈಗಳ್ಳರು, ದಾದಾಗಿರಿ ಮಾಡುವವರು, ಅಧಿಕಾರಿಗಳನ್ನು ಹೆದರಿಸುವವರು ಸುಖವಾಗಿರುತ್ತಾರೆ. ನನ್ನಲ್ಲಿ ಇಂಥ ಒಂದು ಗುಣ ಸಹ ಇಲ್ಲ. ಇಂದು ಕೆಲಸದ ಮಾಡುವ ಸಾಮರ್ಥ್ಯವನ್ನು 'ಗುಣ'ವೆಂದು ಪರಿಗಣಿಸದೆ 'ಅವಗುಣ' ಎಂದು ಪರಿಗಣಿಸಲಾಗುತ್ತದೆ. ಒಂದು ವೇಳೆ ನೀವು ಶಿಫಾರಸ್‌ಗಿರಿಯಿಂದ ಬಂದವರಾಗಿದ್ದರೆ, ನೀವು ತುಂಬಾ ಸಮರ್ಥರೆಂದು ಪರಿಗಣಿಸಲಾಗುತ್ತದೆ.

ಕಚೇರಿಯ ಸಮಯ ಮುಗಿಯುತ್ತಾ ಬಂದಿತ್ತು, ಇದು ನನಗೆ ತಿಳಿಯಲೇ ಇಲ್ಲ. ಅಂದು ಲಂಚ್ ವೇಳೆಯಲ್ಲೂ ಇಂಕ್ರಿಮೆಂಟ್ ಬಗ್ಗೆ ಚರ್ಚೆ ನಡೆಯಿತು. ಹೀಗಾಗಿ ಬೇರೆ ವಿಷಯಗಳ ಬಗ್ಗೆ ಗಮನಹರಿಯಲೇ ಇಲ್ಲ. ನಾನು ಸಂಜೆ ಮಿಸೇಜ್ ಕಶ್ಯಪ್‌ರೊಂದಿಗೆ ಮಾತನಾಡುತ್ತಾ ಕಚೇರಿಯಿಂದ ಹೊರಗೆ ಬಂದೆ. ಅವರು ತಮ್ಮ ಸ್ಕೂಟಿ ಬಳಿಗೆ ಹೋದರು. ನಾನು ರಸ್ತೆಗೆ ಬಂದು ಆಟೊಗಾಗಿ ಕಾಯುತ್ತಾ ನಿಂತೆ.

ನಾಳೆ ರಾಮಖೇಲಾವನ್‌ಗೆ ಹೇಳಿ ನನ್ನ ಸ್ಕೂಟಿಯನ್ನು ರಿಪೇರಿ ಮಾಡಿಸಿಕೊಳ್ಳಬೇಕೆಂದು ಯೋಚಿಸುತ್ತಾ ರಸ್ತೆಯ ಬದಿಗೆ ಬಂದು ನಿಂತೆ. ಒಂದು ಆಟೊ ರಿಕ್ಷಾ ಬರುವುದು ಕಂಡಿತು. ಅದು ನಿಲ್ಲಲು ಕೈಯಿಂದ ಸಂಜ್ಞೆ ಮಾಡಿದೆ. ಆ ಆಟೊ ನನ್ನ ಬಳಿಗೆ ಬಂದು ನಿಲ್ಲುವುದಕ್ಕೂ ಮೊದಲೇ ಅದೆಲ್ಲಿಂದಲೋ ರಿತಿಕ್ ಬಂದು ನನ್ನ ಬಳಿ ನಿಂತ.

'ಬೇಡ, ಮೇಡಂಗೆ ಆಟೊ ಬೇಡ'. ರಿತಿಕ್ ಆಟೊವಾಲಾನಿಗೆ ಹೇಳಿದ. ಪಾಪ, ಅವನು ಮುಂದಕ್ಕೆ ಹೋದ.

'ಇದೇನು?' ನನಗೆ ರಿತಿಕ್‌ನ ಈ ವರ್ತನೆಗೆ ಸಿಟ್ಟು ಬಂತು.

'ಏನು?'

'ಇದೇ! ನನಗೆ ಆಟೊ ಬೇಡಾಂತ ನೀವೇಕೆ ಆಟೊದವನಿಗೆ ಹೇಳಿದಿರಿ?' ನಾನು ಬೇಸರದಿಂದ ಹೇಳಿದೆ. ವಾಸ್ತವವಾಗಿಯೂ ನನಗೆ ರಿತಿಕ್‌ನ ಈ ವರ್ತನೆ ಸುತರಾಂ ಇಷ್ಟವಾಗಿರಲಿಲ್ಲ.

'ಓಹೋ, ನೀವೊಳ್ಳೆ! ಪ್ರತಿಯೊಬ್ಬರು ತಮ್ಮ ಉದ್ಯೋಗದ ಬಗ್ಗೆ ಚಿಂತೆ ಮಾಡ್ತಾರೆ. ನಾನೂ ಮಾಡಿದೆ. ಇದರಲ್ಲಿ ನಿಮಗೆ ಕೆಡುಕೆಂದು ಅನ್ನಿಸಬಾರದು'. ರಿತಿಕ್ ವಿಚಿತ್ರವಾಗಿ ಉತ್ತರಿಸಿದ್ದ.

'ಇದಕ್ಕೂ ನಿಮ್ಮ ಉದ್ಯೋಗಕ್ಕೂ ಏನು ಸಂಬಂಧ? ನೀವೇನು ಆಟೊದವರೇ?' ನನಗೆ ಅತೀವವಾಗಿ ಸಿಟ್ಟು ಬರುತ್ತಿತ್ತು. ಅದುವರೆಗೆ ಕಚೇರಿಯ ಎಲ್ಲಾ ಸಿಬ್ಬಂದಿಗಳು ಇನ್ನೂ ಹೋಗಿರಲಿಲ್ಲ. ಕೆಲವರು ನಿಧಾನವಾಗಿ ಹೊರಗೆ ಬರುತ್ತಿದ್ದರು. ಅವರಲ್ಲಿ ಕೆಲವರು, ನಾನು ರಿತಿಕ್‌ನೊಂದಿಗೆ ಮಾತನಾಡುತ್ತಿರುವುದನ್ನು ನೋಡಿ ತಮ್ಮ ಮನಸ್ಸಿನಲ್ಲಿ ಕಥೆ ಕಟ್ಟುತ್ತಿರಬೇಕೆಂದು ಯೋಚಿಸಿದೆ. ನನ್ನ ಕಚೇರಿಯ ಕೆಲವು ಸಿಬ್ಬಂದಿಗಳು ಕಥೆ ಹೆಣೆಯುವುದರಲ್ಲಿ ನಿಪುಣರಾಗಿದ್ದಾರೆ. ಹೋಗಲಿ, ನನಗೆಂದೂ ಇಂಥ ಕಥೆಗಳ ಬಗ್ಗೆ ಯೋಚನೆಯಿಲ್ಲ, ಆದರೂ ನನಗೆ ರಿತಿಕ್‌ನ ವರ್ತನೆ ಕೆಡುಕೆನಿಸುತ್ತಿತ್ತು.

'ಖಂಡಿತ ನಾನು ಆಟೊವಾಲಾ ಅಲ್ಲ, ಆದರೆ ನಿನ್ನೆ ನಿಮ್ಮನ್ನು ನಿಮ್ಮ ಮನೆಗೆ ಬಿಟ್ಟಾಗ, ಅದಕ್ಕೆ ಪ್ರತಿಯಾಗಿ ನಾನು ಒಂದು ಕಪ್ ಕಾಫಿಗೆ ಹಕ್ಕುದಾರನಾಗುತ್ತೀನಲ್ಲ!' ಎಂದಿದ್ದ ರಿತಿಕ್.

'ನಿನ್ನೆಯೇ ಕಾಫಿಗೆ ಏಕೆ ಬರಲಿಲ್ಲ?' ನನ್ನ ಬಾಯಿಯಿಂದ ಈ ಮಾತು ಹೊರಟಿತು, ನಾನು ಕೂಡಲೇ ನನ್ನ ನಾಲಿಗೆಯನ್ನು ಹಲ್ಲಿನಿಂದ ಮೆಲ್ಲನೆ ಕಚ್ಚಿಕೊಂಡೆ. ಹೀಗೆ ನಾನು ಕೇಳಬಾರದಿತ್ತು.

'ನಿನ್ನೆ ನೀವು ನೆನೆದಿದ್ದಿರಿ. ನೀವು ಬಟ್ಟೆಗಳನ್ನು ಬದಲಿಸದೆ ಕಾಫಿ ಮಾಡಲು ಹೋಗುತ್ತಿದ್ದಿರಿ. ನಾನು ಕಾಫಿ ಕುಡಿದು ಹೋಗುವವರೆಗೆ ನೀವು ಬಟ್ಟೆ ಬದಲಾಯಿಸಲು ಸಾಧ್ಯವಾಗುತ್ತಿರಲಿಲ್ಲ. ನಿಮಗೆ ನೆಗಡಿಯಾಗುವ ಸಾಧ್ಯತೆಯಿತ್ತು...' ಎಂದ ರಿತಿಕ್.

'ಮತ್ತೆ ಜ್ವರ ಸಹ ಬರಬಹುದಿತ್ತು.' ಈಗ ನಾನು ರಿತಿಕ್‌ನ ವಾಕ್ಯವನ್ನು ಪೂರ್ಣ ಮಾಡಿದೆ. ಏಕೋ ಏನೋ ಆ ಕ್ಷಣದಿಂದ ನಾನು ರಿತಿಕ್‌ನೊಂದಿಗೆ ಸಹಜತೆಯನ್ನು ಮನಗಾಣುತ್ತಿದ್ದೆ.

'ಹೋಗೋಣ್ವ?' ರಿತಿಕ್ ಕೇಳಿದ. ನಾನು ಮಾತನಾಡದೆ ಅವನ ಬೈಕ್ ಹಿಂದೆ ಕೂತೆ. ಸ್ವಲ್ಪ ದೂರ ಹೋದ ನಂತರ ಮೂರು ದಾರಿಗಳು ಸೇರುವ ಸ್ಥಳ ಬಂತು. ರಿತಿಕ್ ನನ್ನ ಮನೆಗೆ ಹೋಗುವ ನೇರ ರಸ್ತೆಯನ್ನು ಬಿಟ್ಟು ಬೇರೊಂದು ರಸ್ತೆಯಲ್ಲಿ ಹೋದ, ಆ ರಸ್ತೆ ಪೇಟೆಯೆಡೆಗೆ ಹೋಗುತ್ತಿತ್ತು.

'ಓಹ್, ಈ ಕಡೆಯಿಂದ ಏಕೆ?' ನಾನು ಕೇಳಿದ್ದೆ.

'ಈಗಲೇ ಗೊತ್ತಾಗುತ್ತೆ.'

ರಿತಿಕ್ 'ಇಂಡಿಯನ್ ಕಾಫಿ ಹೌಸ್' ಎದುರು ಬೈಕ್ ನಿಲ್ಲಿಸಿದ್ದ.

'ನಿಮ್ಮ ಮನೆಯಲ್ಲಿಯೇ ಕಾಫಿ ಕುಡಿಯುವ ಅವಶ್ಯಕತೆಯಿಲ್ಲ'. ರಿತಿಕ್ ಕಾಫಿ ಹೌಸಿಗೆ ಬರುವಂತೆ ಸಂಜ್ಞೆ ಮಾಡಿದ. ರಿತಿಕ್ ಎರಡು ಕಾಫಿಗೆ ಆರ್ಡರ್ ಮಾಡುತ್ತಾ ಕೇಳಿದ್ದ, 'ಸ್ವಲ್ಪ ಸ್ನಾಕ್ಸ್ ತೆಗೆದುಕೊಳ್ಳೋಣ್ವ?' ನಂತರ ನನ್ನ ಉತ್ತರಕ್ಕಾಗಿ ಕಾಯದೆ ಎರಡು ವೆಜ್ ಕಟ್ಲೆಟ್‌ಗಳಿಗೆ ಆದೇಶಿಸಿದ್ದ.

'ನಾನು ಬಹುಶಃ ನಿನ್ನೆ ನನ್ನ ಪರಿಚಯವನ್ನು ಹೇಳಿದ್ದೆ. ಇವತ್ತು ಮತ್ತೆ ಹೇಳ್ತೀನಿ. ನಾನು ರಿತಿಕ್ ಶರ್ಮಾ. ನನ್ನ ತಂದೆತಾಯಿ ಅಲೀಗಢದಲ್ಲಿದ್ದಾರೆ. ನನ್ನ ಅಕ್ಕಂದಿರ ಮದುವೆಯಾಗಿದೆ. ಒಬ್ಬಳು ಲಖನೌದಲ್ಲಿದ್ದಾಳೆ, ಇನ್ನೊಬ್ಬಳು ಅಹಮದಾಬಾದಿನಲ್ಲಿದ್ದಾಳೆ. ನನ್ನಿಬ್ಬರು ಬಾವಂದಿರು ಸರ್ಕಾರಿ ಕೆಲಸದಲ್ಲಿದ್ದಾರೆ, ಹೀಗಾಗಿ ತುಂಬಾ ಸುಖವಾಗಿದ್ದಾರೆ. ನಾನು ಮಲ್ಟಿನ್ಯಾಷನಲ್ ಕಂಪನಿ ಕ್ವಾಯರ್‌ನಲ್ಲಿದ್ದೇನೆ. ಈ ಕಂಪನಿ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಎಕ್ಸ್‌ಪೋರ್ಟ್ ಇಂಪೋರ್ಟ್ ಮಾಡುತ್ತದೆ. ನಾನು ಏರಿಯಾ ಮ್ಯಾನೇಜರ್. ಅನ್ನಿಸಲ್ಲ ಅಲ್ವಾ', ರಿತಿಕ್ ತನ್ನ ಬಗ್ಗೆ ಹೇಳುತ್ತಾ ಹೀಗೆ ಕೇಳಿದ್ದ.

'ಬಹುಶಃ' ನಾನೂ ಹೇಳಿದ್ದೆ.

'ಖಂಡಿತ ನಿಜ! ಈ ಭಕ್ತ ನಿಮ್ಮ ಮಾತಿನಿಂದ ಸಂತಸಗೊಂಡ' ರಿತಿಕ್ ಹೇಳಿದ್ದ, 'ನನ್ನ ಮದುವೆಯಾಗಿದೆಯೋ, ಇಲ್ಲವೋ ಎಂದು ನೀವು ಯೋಚಿಸುತ್ತಿರಬೇಕು; ಫಾರ್ ಯುವರ್ ಕೈಂಡ್ ಇನ್‌ಫಾರ್ಮೇಶನ್, ನನಗೆ ಮದುವೆಯಾಗಿಲ್ಲ, ಮದುವೆ ಮಾಡಿಕೊಳ್ಳುವ ಇಚ್ಛೆ ಸಹ ಇಲ್ಲ'.

'ಏಕೆ?'

'ಮದುವೆಗಿದುವೆ ವ್ಯರ್ಥದ ಸಂಗತಿಗಳು. ನನಗೆ ವಿವಾಹವೆಂಬ ಪದ್ಧತಿಯಲ್ಲಿ ನಂಬಿಕೆಯಿಲ್ಲ. ಮದುವೆ ಮಾಡಿಕೊಂಡರೆ ಏನಾಗುತ್ತೆ? ಮಕ್ಕಳನ್ನು ಹೆರುವ ಲೈಸೆನ್ಸ್ ತಾನೇ ಸಿಗುತ್ತೆ, ಅಷ್ಟೇ!' ರಿತಿಕ್ ಬೇಜವಾಬ್ದಾರಿಯಿಂದ ಹೇಳಿದ್ದ. ಈ ವಿಷಯ ನನ್ನ ಮನಸ್ಸಿನಲ್ಲೂ ಇತ್ತು, ಆದರೆ ನಾನು ಹೀಗೆ ವಿಕಾರವಾಗಿ ವ್ಯಕ್ತಪಡಿಸುತ್ತಿರಲಿಲ್ಲ.

'ಸಾರಿ! ನಾನು ಏನೇನೋ ಹೇಳಿಬಿಟ್ಟೆ. ನಿಮ್ಮ ಅಭಿಪ್ರಾಯ ಬೇರೆ ಇರಬಹುದು. ಪ್ರತಿಯೊಬ್ಬ ವ್ಯಕ್ತಿ ತನ್ನ ಅಭಿಪ್ರಾಯಗಳನ್ನು ಮುಚ್ಚುಮರೆ ಮಾಡಬಾರದು ಎಂಬುದು ನನ್ನ ಅಭಿಪ್ರಾಯವಾಗಿದೆ. ನಾನೇನು ಯೋಚನೆ ಮಾಡ್ತೀನೋ, ಅದನ್ನು ನಿಮ್ಮೆದುರಿಗಿಟ್ಟೆ'. ರಿತಿಕ್‌ನ ಈ ಮಾತುಗಳಿಂದ ನಾನು ಪ್ರಭಾವಿತಳಾಗಿದ್ದೆ.

'ನೀವು ಸರಿಯಾಗಿಯೇ ಹೇಳುತ್ತಿದ್ದೀರಿ. ಮನುಷ್ಯ ಸಾಧ್ಯವಾದಷ್ಟೂ ನಿಜವನ್ನೇ ಹೇಳಬೇಕು'. ನಾನು ಅವನ ಹೇಳಿಕೆಗಳನ್ನು ಸಮರ್ಥಿಸಿದ್ದೆ. ಅದೇ ವೇಳೆಗೆ ವೇಟರ್ ಕಾಫಿ ಮತ್ತು ಕಟ್ಲೆಟ್ ತಂದ. ನಾನು ಮೌನ ವಹಿಸಿದ್ದೆ, ಅವನೂ ಮೌನವಾಗಿದ್ದ.

'ಈಗ ನೀವು ನಿಮ್ಮ ಬಗ್ಗೆ ಸ್ವಲ್ಪ ಹೇಳಿ', ವೇಟರ್ ಹೋದ ನಂತರ ರಿತಿಕ್ ಕೇಳಿದ್ದ.

'ನಿಮಗೆ ನನ್ನ ಬಗ್ಗೆ ಎಲ್ಲಾ ತಿಳಿದಿದೆ', ನಾನು ತಮಾಷೆ ಮಾಡಿದ್ದೆ.

'ಎಲ್ಲಾ ಅಲ್ಲ, ಸ್ವಲ್ಪ ತಿಳಿದಿದೆ'.